# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆ 79/2022

ಫಾಸಾ .04

ಚಾಸಾ. 07

| | | |
|---|---|---|
| ಸಾಕ್ಷಿಯ ಹೆಸರು | : | ಕಿರಣಕುಮಾರ ಶಿಂಗಾಡಿ |
| ತಂದೆ ಹೆಸರು | : | ನಾಗಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಪೈನಾನ್ಸ ಕಂಪನಿ ಕೆಲಸ |
| ವಾಸಸ್ಥಳ | : | ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 31-07-2025 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-6 ರುದ್ರಯ್ಯ ಶಿವಬಸಯ್ಯ ಸುಂಕದ ರವರ ಪರಿಚಯ ಇದೆ. ಮೃತ ನಾಗರಾಜ ರವರ ಪರಿಚಯ ಇದೆ .

2. ದಿಃ 30-7-2019 ರಂದು ಧಾರವಾಡ ಸಬ ಅರ್ಬನ ಪೊಲೀಸರು ನನ್ನನ್ನು ಕರೆಸಿದ್ದು ಮೃತ ನಾಗರಾಜ ರವರು ಧರಿಸಿದ್ದ ಬಟ್ಟೆಗಳನ್ನು ಪೊಲೀಸರು ನನಗೆ ತೋರಿಸಿದರು. ನೀಲಿ ಬಣ್ಣದ ಶರ್ಟ , ಒಂದು ಜೀನ್ಸ ಪ್ಯಾಂಟ , 2 ಬಿಳಿ ಬಣ್ಣದ ಶೂ , ಬ್ಲೂ ಕಲರ ಚಡ್ಡಿ ಮತ್ತು ಬ್ರೌನ ಕಲರ ಬೆಲ್ಟನ್ನು ಪೊಲೀಸರು ನನಗೆ ತೋರಿಸಿದ್ದು ಅಲ್ಲಿ ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಶಾನೆ ಪಿ- 21 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 21 (ಎ) ಎಂದು ಗುರುತಿಸಲಾಯಿತು. ಆ ದಿನ ನನ್ನ ಜೊತೆ ರುದ್ರಯ್ಯ ಇದ್ದನು. ಆತನೂ ಸಹ ಸದರಿ ಪಂಚನಾಮೆಗೆ ಸಹಿ ಮಾಡಿದ್ದಾನೆ. ಪೊಲೀಸರು ಅಮಾನತುಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸೀಲು ಮಾಡಲಾದ ವಸ್ತುಗಳನ್ನು ತೆರೆಯಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು. ಒಂದು ಶರ್ಟ ನ್ನು

ಮುಮಾ-4 ಎಂದು ಗುರುತಿಸಲಾಯಿತು. ಒಂದು ಜೀನ್ಸ ಪ್ಯಾಂಟನ್ನು ಮುಮಾ-5 ಎಂದು ಗುರುತಿಸಲಾಯಿತು. ಶೂಗಳನ್ನು ಮುಮಾ-6 ಎಂದು ಗುರುತಿಸಲಾಯಿತು. ಒಂದು ಬೆಲ್ಟನ್ನು ಮುಮಾ-7 ಎಂದು ಗುರುತಿಸಲಾಯಿತು. ನೀಲಿ ಚಡ್ಡಿ ಯನ್ನು ಮುಮಾ-8 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸಂಜೆ 5.15 ರಿಂದ 6.15 ಘಂಟೆ ವರೆಗೆ ಜರುಗಿಸಿದ್ದಾರೆ .

3. ದಿಃ 1-8-2019 ರಂದು ಪೊಲೀಸರು ನನ್ನನ್ನು ಕರೆಸಿದ್ದು ಸಬ ಅರ್ಬನ ಪೊಲೀಸರು ಪೆನ್ ಡ್ರೈವ ತಂದಿರುವುದಾಗಿ ತಿಳಿಸಿದರು. ಒಂದು ಸಿಸಿ ಟಿ ವಿ ಪೂಟೇಜ ಕರ್ನಾಟಕ ಯುನಿವರ್ಸಿಟಿ ಸೈನ್ಸ ಮ್ಯುಜಿಯಮ ಮತ್ತು ಲಿಕ್ಕರ ಶಾಪನ ಪೂಟೇಜ ಎಂದು ತಿಳಿಸಿದರು. ಸದರಿ ಪೆನ್ ಡ್ರೈವನ್ನು ಕಂಪ್ಯೂಟರಗೆ ಕನೆಕ್ಟ ಮಾಡಿ ಪೆನ್ ಡ್ರೈವ ನಲ್ಲಿದ್ದ ದೃಶ್ಯಾವಳಿಗಳನ್ನು ನನಗೆ ತೋರಿಸಿದ್ದಾರೆ. ಸದರಿ ಪೂಟೇಜನಲ್ಲಿ ಆರೋಪಿ ಮಲ್ಲಿಕಾರ್ಜುನ ಮತ್ತು ನವೀನ ಮಧ್ಯಾಹ್ನ 3 ಘಂಟೆ ಸುಮಾರಿಗೆ 3 ಟೆಟ್ರಾ ಪಾಕೇಟಗಳನ್ನು ಖರೀದಿ ಮಾಡುತ್ತಿರುವುದು ಕಂಡುಬಂದಿರುತ್ತದೆ. ಇನ್ನೊಂದು ಪೂಟೇಜನಲ್ಲಿ ಆರೋಪಿ ಮಲ್ಲಿಕಾರ್ಜುನ ಮತ್ತು ನವೀನ ರವರು ಒಂದು ಎಚ್ ಎಫ್ ಡೀಲಕ್ಸ ವಾಹನದಲ್ಲಿ ಹೋಗುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಅವರೊಂದಿಗೆ ಮೃತ ನಾಗರಾಜ ಇನ್ನೊಂದು ಸ್ಕೂಟಿಯಲ್ಲಿ ಹೋಗುತ್ತಿರುವುದು ಕಂಡುಬಂದಿರುತ್ತದೆ. ಆಗ ಸಮಯ ಮಧ್ಯಾಹ್ನ 3.40 ಘಂಟೆ ಆಗಿತ್ತು. ನಂತರ ಆರೋಪಿ ಮಲ್ಲಿಕಾರ್ಜುನ ಒಬ್ಬನೆ ಬೈಕನಲ್ಲಿ ಕರ್ನಾಟಕ ಯುನಿವರ್ಸಿಟಿ ಕಡೆಯಿಂದ ಶ್ರೀಗನರ ಸರ್ಕಲಗೆ ಕಡೆಗೆ ಹೋಗುವುದು ಕಂಡುಬರುತ್ತದೆ. ಪೆನ್ ಡ್ರೈವನಲ್ಲಿನ ದೃಶ್ಯಾವಳಿಗಳನ್ನು ಡಿ ವಿ ಡಿ ಗೆ ರೈಟ ಮಾಡಿ ತೆಗೆದಿರುತ್ತಾರೆ. ನಂತರ ಪೆನ್ ಡ್ರೈವ ಮತ್ತು ಡಿ ವಿ ಡಿಯನ್ನು ನನ್ನ ಸಮಕ್ಷಮ ಪ್ಯಾಕ ಮಾಡಿದ್ದಾರೆ . ಸದರಿ ಸ್ಥಳದಲ್ಲಿ ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯನ್ನು ಈಗಾಗಲೇ ನಿಶಾನೆ ಪಿ- 20 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 20 (ಬಿ) ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲಕ್ಕೆ ಸಾಕ್ಷಿ ಒಬ್ಬರೆ ಹಾಜರಿದ್ದರು

ಅವರೂ ಸಹ ಪಂಚನಾಮೆಗೆ ಸಹಿ ಮಾಡಿದ್ದಾರೆ. ಆ ಸಮಯದಲ್ಲಿ ಮೃತ ನಾಗರಾಜ ರವರ ಸಹೋದರ ರಾಕೇಶ ಇದ್ದರು. ದೃಶ್ಯಾವಳಿಯಲ್ಲಿ ಕಂಡುಬರುವ ವ್ಯಕ್ತಿಗಳನ್ನು ರಾಕೇಶ ರವರ ಗುರುತಿಸಿದ್ದಾರೆ. ಪಂಚನಾಮೆಯನ್ನು ಸಂಜೆ 6.30 ರಿಂದ 9.30 ಘಂಟೆ ವರೆಗೆ ಮಾಡಿದ್ದಾರೆ . ಸದರಿ ಡಿ ವಿ ಡಿ ಮತ್ತು ಪೆನ್ ಡ್ರೈವ ಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಶಾನೆ ಪಿ- 18 ಮತ್ತು 19 ಎಂದು ಗುರುತಿಸಲಾಗಿದೆ.

**<u>ಪಾಟೀಸವಾಲು ಆರೋಪಿತರ ಪರ ಶ್ರೀ ಎ ವಿ ಇ ವಕೀಲರಿಂದಃ</u>**

4. ಚಾಸಾ-1 ರಾಕೇಶ ಮತ್ತು ನಾನು ಒಂದೇ ಊರಿನವರು ಅಂದರೆ ಸರಿ. ಬಟ್ಟೆ ಪಂಚನಾಮೆ ಕಾಲಕ್ಕೆ ಬಟ್ಟೆಗಳನ್ನು ನನಗೆ ತೋರಿಸಿಲ್ಲ ಅಂದರೆ ಸರಿಯಲ್ಲ. ದಿಃ 30-7-2019 ರಂದು ಧಾರವಾಡ ಸಬ ಅರ್ಬನ ಪೊಲೀಸರು ನನ್ನನ್ನು ಕರೆಸಿದ್ದು ಮೃತ ನಾಗರಾಜ ರವರು ಧರಿಸಿದ್ದ ಬಟ್ಟೆಗಳನ್ನು ಪೊಲೀಸರು ನನಗೆ ತೋರಿಸಿದ್ದು ನೀಲಿ ಬಣ್ಣದ ಶರ್ಟ , ಒಂದು ಜೀನ್ಸ ಪ್ಯಾಂಟ , 2 ಬಿಳಿ ಬಣ್ಣದ ಶೂ , ಬ್ಲೂ ಕಲರ ಚಡ್ಡಿ ಮತ್ತು ಬ್ರೌನ ಕಲರ ಬೆಲ್ಟನ್ನು ಪೊಲೀಸರು ನನಗೆ ತೋರಿಸಿದ್ದು ಅಲ್ಲಿ ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ದಿನ ನನ್ನ ಜೊತೆ ರುದ್ರಯ್ಯ ಇದ್ದು ಆತನೂ ಸಹ ಸದರಿ ಪಂಚನಾಮೆಗೆ ಸಹಿ ಮಾಡಿದ್ದು ಪಂಚನಾಮೆಯನ್ನು ಸಂಜೆ 5.15 ರಿಂದ 6.15 ಘಂಟೆ ವರೆಗೆ ಜರುಗಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ದಿಃ 1-8-2019 ರಂದು ಪೊಲೀಸರು ನನ್ನನ್ನು ಕರೆಸಿದ್ದು ಸಬ ಅರ್ಬನ ಪೊಲೀಸರು ಪೆನ್ ಡ್ರೈವ ತಂದಿರುವುದಾಗಿ ತಿಳಿಸಿದ್ದು ಒಂದು ಸಿಸಿ ಟಿ ವಿ ಪೂಟೇಜ ಕರ್ನಾಟಕ ಯುನಿವರ್ಸಿಟಿ ಸೈನ್ಸ ಮ್ಯುಜಿಯಮ ಮತ್ತು ಲಿಕ್ಕರ ಶಾಪನ ಪೂಟೇಜ ಎಂದು ತಿಳಿಸಿದ್ದು ಸದರಿ ಪೆನ್ ಡ್ರೈವನ್ನು ಕಂಪ್ಯೂಟರಗೆ ಕನೆಕ್ಟ ಮಾಡಿ ಪೆನ್ ಡ್ರೈವ ನಲ್ಲಿದ್ದ ದೃಶ್ಯಾವಳಿಗಳನ್ನು ನನಗೆ ತೋರಿಸಿದ್ದು ಸದರಿ ಪೂಟೇಜನಲ್ಲಿ ಆರೋಪಿ ಮಲ್ಲಿಕಾರ್ಜುನ ಮತ್ತು ನವೀನ ಮಧ್ಯಾಹ್ನ 3 ಘಂಟೆ ಸುಮಾರಿಗೆ 3

ಟೆಟ್ರಾ ಪಾಕೇಟಗಳನ್ನು ಖರೀದಿ ಮಾಡುತ್ತಿರುವುದು ಕಂಡುಬಂದಿದ್ದು ಇನ್ನೊಂದು ಪೂಟೇಜನಲ್ಲಿ ಆರೋಪಿ ಮಲ್ಲಿಕಾರ್ಜುನ ಮತ್ತು ನವೀನ ರವರು ಒಂದು ಎಚ್ ಎಫ್ ಡೀಲಕ್ಸ ವಾಹನದಲ್ಲಿ ಹೋಗುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಅವರೊಂದಿಗೆ ಮೃತ ನಾಗರಾಜ ಇನ್ನೊಂದು ಸ್ಕೂಟಿಯಲ್ಲಿ ಹೋಗುತ್ತಿರುವುದು ಕಂಡುಬಂದಿರುತ್ತದೆ, ಆಗ ಸಮಯ ಮಧ್ಯಾಹ್ನ 3.40 ಘಂಟೆ ಆಗಿತ್ತು. ನಂತರ ಆರೋಪಿ ಮಲ್ಲಿಕಾರ್ಜುನ ಒಬ್ಬನೆ ಬೈಕನಲ್ಲಿ ಕರ್ನಾಟಕ ಯುನಿವರ್ಸಿಟಿ ಕಡೆಯಿಂದ ಶ್ರೀಗನರ ಸರ್ಕಲಗೆ ಕಡೆಗೆ ಹೋಗುವುದು ಕಂಡುಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೆನ್ ಡ್ರೈವನಲ್ಲಿನ ದೃಶ್ಯಾವಳಿಗಳನ್ನು ಡಿ ವಿ ಡಿ ಗೆ ರೈಟ ಮಾಡಿ ತೆಗೆದು ನಂತರ ಪೆನ್ ಡ್ರೈವ ಮತ್ತು ಡಿ ವಿ ಡಿಯನ್ನು ನನ್ನ ಸಮಕ್ಷಮ ಪ್ಯಾಕ ಮಾಡಿ ಪಂಚನಾಮೆಯನ್ನು ಸಂಜೆ 6.30 ರಿಂದ 9.30 ಘಂಟೆ ವರೆಗೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ನನ್ನ ಮುಂದೆ ಡಿ ವಿ ಆರ್ ಹಾಜರುಪಡಿಸಿಲ್ಲ. ನಾನು ನೋಡಿರುವ ಪೂಟೇಜಗಳು ಲಿಕ್ಕರ ಶಾಪ ಮತ್ತು ಸೈನ್ಸ ಮ್ಯುಜಿಯಮನದು ಅಲ್ಲ ಅಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಪೊಲೀಸರು ಸುಳ್ಳು ಪೂಟೇಜಗಳನ್ನು ನನಗೆ ತೋರಿಸಿದ್ದು ಆ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1-8-2019 ರಂದು ಪೊಲೀಸರು ಯಾವುದೇ ಪಂಚನಾಮೆ ಬರೆದಿಲ್ಲ ಅಂದರೆ ಸರಿಯಲ್ಲ.

7. ನಾನು ಪೋಲೀಸರು ಕರೆಸಿದಾಗ 3-4 ಸಹಿ ಮಾಡಿದ್ದೇನೆ. ಪೋಲೀಸರು ನಮ್ಮ ಮನೆಗೆ ಬಂದಿರಲಿಲ್ಲ, ಪೋಲಿಸಠಾಣೆಯಲ್ಲೇ ಸಹಿ ಮಾಡಿಸಿಕೊಂಡರು. ಆ ದಿನ ಬಟ್ಟೆ , ಶೂಜು ಎಲ್ಲ ತೋರಿಸಿದರು ಇದೆಲ್ಲ ಗುರುತಾಗುತ್ತಾ ಎಂದು ಕೇಳಿದರು ನಾನು ಗುರುತಿಸಿದೆ ಆ ಬಗ್ಗೆ ನಾನು ಅಲ್ಲಿ ಸಹಿ ಮಾಡಿದ್ದೇನೆ. ನೀಲಿ ಬಣ್ಣದ ಶರ್ಟ, ಬ್ಲೂ ಕಲರ ಜೀನ್ಸ ಪ್ಯಾಂಟ 2 ಬಿಳಿ ಶೂಗಳು , ಒಂದು ಬ್ರೌನ್ ಕಲರ ಬೆಲ್ಟು ಮತ್ತು ನೀಲಿ ಕಲರ ಚಡ್ಡಿ ಇತ್ತು. ಇದು ನಾಗರಾಜ ಹರಪನಳ್ಳಿಯವರದು ಎಂದು ನಾನು ಗುರುತಿಸಿದೆ. ಪೋಲೀಸರು ಇದು ಹೌದು ಅಲ್ಲವಾ ಎಂದು ಕೇಳಿದರು ನಾನು ಹೌದು ಎಂದು ಹೇಳಿದೆ ಅಂದರೆ ಸರಿ. ಸಾಯಂಕಾಲ 5.30 ರಿಂದ 6.30 ವರೆಗೂ ಆ ಪ್ರಕ್ರೀಯೆ ನಡೆಯಿತು .

ಪೋಲೀಸರು ಆ ಪಂಚನಾಮೆ ಬರೆದಿಟ್ಟಿದ್ದರು ನಾನು ಓದಿ ಅದಕ್ಕೆ ಸಹಿ ಮಾಡಿದೆ. ಒಂದು ಸಹಿ ನಾನು ಪೋಲಿಸಠಾಣೆಯಲ್ಲಿ ಪಂಚನಾಮೆಗೆ ಮಾಡಿದ್ದೇನೆ , ಇನ್ನೊಂದು ಸಹಿ ಒಂದು ದಿನ ಬಿಟ್ಟು ಸಹಿ ಮಾಡಿದ್ದೇನೆ. ಅದು ಅಗಸ್ಟ 1 ನೇ ತಾರೀಕು ಮಾಡಿದ್ದೇನೆ. ಡಿವಿಡಿ ಮತ್ತು ಕ್ಯಾಸೆಟ್ ತೋರಿಸುತ್ತಿದ್ದರು ಅವತ್ತು ಒಂದು ಸಹಿ ಮಾಡಿದ್ದೇನೆ. ದೂರುದಾರರು ನನ್ನ ಗೆಳೆಯರಾಗಿರುವುದರಿಂದ ಅವರು ಒಂದೇ ಊರಿನವರಾಗಿರುವುದರಿಂದ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೋಪಿತರಿಗೂ ಸಂಬಂಧ ಇಲ್ಲ ಆದರೂ ಪೋಲೀಸರು ಮಾತು ಕೇಳಿ ನಾನು ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

8. ಮಲ್ಲಿಕಾರ್ಜುನ ನವೀನ ರವರು ಒಂದು ಬೈಕನಲ್ಲಿ ಮತ್ತು ಮೃತ ನಾಗರಾಜ ಇನ್ನೊಂದು ಸ್ಕೂಟಿಯಲ್ಲಿ ಹೋದರು ಎಂದು ಸಿಸಿ ಟಿವಿ ಪೂಟೇಜನಲ್ಲಿ ಇದೆ ಎಂದು ನಾನು ಸಿಸಿಟಿವಿ ಪೂಟೇಜ ನೋಡದೆ ಇದ್ದರೂ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪೂಟೇಜ ನೋಡಿದ್ದೇನೆ. ನಾನು ಪೂಟೇಜ ನೋಡುತ್ತಿರುವುದನ್ನು ಪೋಲೀಸರು ಫೋಟೊ ತೆಗೆದಿಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(**ಬಿ. ಎಸ್. ಭಾರತಿ**)
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.